ಕಾರಣವೇನೂ ಇಲ್ಲ. ಅವಳ ಮದುವೆ ನಡೆಯಬೇಕೆಂದು ಯಾರೂ ಪ್ರಯತ್ನ ನಡೆಸಲಿಲ್ಲ. ಸ್ವತಃ ಅವಳು ಕೂಡ ಮಾಡಲಿಲ್ಲ. ಈಗ ಅವಳ ವಯಸ್ಸು ನಲ್ವತ್ತರ ಗಡಿಯನ್ನು ಸಮೀಪಿಸುತಿದೆ. ಅವಳಿಗೆ ಈ ರೀತಿಯ ಬದುಕು ಒಳ್ಳೆಯದೆನಿಸಲಾರಂಭಿಸಿದೆ.

ಒಳ್ಳೆಯದೆಂದು ಕಾಣುತ್ತದೆಯೋ ಅಥವಾ ರೂಢಿಯಾಗಿದೆಯೋ ಅವಳಿಗೇ ಗೊತ್ತು. ಸಾಮಾನ್ಯವಾಗಿ ಆಫೀಸಿನ ಕೆಲಸ ಮುಗಿದ ಬಳಿಕ ಅವಳು ಅವರ ಮನೆಗೆ ಬರುತ್ತಾಳೆ, ಅವರೊಂದಿಗೆ ಮಾತನಾಡುತ್ತಾ ಕುಳಿತುಕೊಳ್ಳುತ್ತಾಳೆ. ಆದರೆ ಈ ಚಾರು ಪಕ್ಕಾ ಪ್ರಾಕ್ಟಿಕಲ್! ಅವಳು ಹೇಳುವುದು ಹೀಗೆ–

'ಸರ್, ನಿಮ್ಮದೆಲ್ಲಾ ಕಾವ್ಯಾತ್ಮಕ ಚಿಂತನೆ. ಸೂರ್ಯ ರಂಗಪಂಚಮಿ ಏನೂ ಆಡುವುದಿಲ್ಲ. ಇನ್ನು ಸ್ನಾನ ಮಾಡಲು ಎಲ್ಲಿಗೂ ಹೋಗುವವನಲ್ಲ. ಅವನು ಒಂದೇ ಜಾಗದಲ್ಲಿ ಇರುತ್ತಾನೆ, ತಿರುಗಾಡುತ್ತಿರುವುದು ನಮ್ಮ ಈ ಭೂಮಿ ಮತ್ತು ಅವಳೊಂದಿಗೆ ನಾವು. ಇದು ನಿಮಗೆ ಚೆನ್ನಾಗಿ ತಿಳಿದಿದೆ. ಹಾಗಿರುವಾಗ ಈ ಬೇಡದ್ದನ್ನೆಲ್ಲಾ ಯಾಕೆ ಯೋಚಿಸುತ್ತಿದ್ದೀರಿ?'

ಮನುಷ್ಯ ವಿದ್ಯೆ ಕಲಿತಿರುವುದು ನಿಜ. ಇಂತಹ ಒರಟು ಉತ್ತರವನ್ನು ಶಿಕ್ಷಣವೇ ಮನುಷ್ಯನಿಗೆ ನೀಡಿದೆ. ಆದರೆ ಇಲ್ಲಿ ಯಾರಿಗೆ ಪರೀಕ್ಷೆ ಪೇಪರ್ ಬರೆಯುವುದು ಇದೆ? ಯಾರನ್ನಾದರೂ ಚಿಂತನೆಯಿಂದ ನಿರ್ಬಂಧಿಸುವುದು ಸಾಧ್ಯವೇ? ಹಾಗಿರುವಾಗ ಸೂರ್ಯ ಸಮುದ್ರದಲ್ಲಿ ಸ್ನಾನ ಮಾಡಲು ಇಳಿಯುತ್ತಾನೆ ಎಂದು ಯೋಚಿಸುವುದರಲ್ಲಿ ತಪ್ಪೇನು?

ಇಲ್ಲ, ಚಾರುವಿಗೆ ಪ್ರತಿಯೊಂದು ಪ್ರಶ್ನೆಗೆ ಉತ್ತರ ಬೇಕು. ಅವಳ ದೃಷ್ಟಿಯಲ್ಲಿ ಪ್ರತಿಯೊಂದು ಪ್ರಶ್ನೆಗೆ ಉತ್ತರ ಇರಲೇಬೇಕು. ಯಾವ ಪ್ರಶ್ನೆಗೆ ಉತ್ತರವಿಲ್ಲವೋ ಆ ಪ್ರಶ್ನೆ ನಿರರ್ಥಕವೆಂದು ಅವಳು ಹೇಳುತ್ತಾಳೆ. ಅವಳೊಬ್ಬಳು ಹುಚ್ಚಿ! ಎಲ್ಲಾ ಪ್ರಶ್ನೆಗಳಿಗೆ ಉತ್ತರ ಎಲ್ಲಿರುತ್ತವೆ?

ಒಂದು ವೇಳೆ ಹಾಗೆ ಇರುವುದಾದರೆ ಯಾರಾದರೂ ಇದನ್ನು ಹೇಳಬೇಕು. ಹಿಂದಿನ ಎಲ್ಲಾ ಘಟನೆಗಳು ಎಲ್ಲಿ ಹೋದವು? ಪ್ರತಿಯೊಬ್ಬರ ಬದುಕು ಭಿನ್ನವಾದುದು; ಪ್ರತಿಯೊಂದು ಬದುಕಿನ ಕ್ಷಣ ಭಿನ್ನವಾದುದು ಮತ್ತು ಕ್ಷಣ ಕ್ಷಣಕ್ಕೂ ಭಿನ್ನವಾಗಿರುವುದೇ ಘಟಿಸುತ್ತದೆ. ಪ್ರತಿಯೊಬ್ಬರೂ ತಮ್ಮಷ್ಟಕ್ಕೆ ಬದುಕಿನಲ್ಲಿ ಸಂಗ್ರಹಿಸಿದ್ದ ಪ್ರೀತಿ, ದ್ವೇಷ, ಸುಖ, ದುಃಖಗಳು ಏನಾದವು? ಬದುಕಿನಲ್ಲಿ ಇಷ್ಟೆಲ್ಲಾ ಘಟನೆಗಳು ನಡೆದಿವೆಯಾದರೂ ಅದಕ್ಕೆ ಪುರಾವೆಯಾದರೂ ಏನಿದೆ? ಹಾಗೆ ಇರುವುದೇ ಆಗಿದ್ದರೆ ಅದು ಪ್ರತಿಯೊಬ್ಬರ ನೆನಪಿನಲ್ಲಿರುವುದು. ಮನುಷ್ಯ ಅಳಿದು ಹೋದ ಬಳಿಕ ಆ ನೆನಪಿನಿಂದ ಏನಾಗುವುದಿದೆ? ಆ ನೆನಪುಗಳು, ಆ ಘಟನೆಗಳು ಅಳಿಸಿ ಹೋಗುವಂತಹದಲ್ಲವೇ? ಹಾಗಿದ್ದರೆ, ಪ್ರತಿಯೊಬ್ಬರ ಬದುಕಿನಲ್ಲಿ ನಡೆದ ಮಹತ್ವಪೂರ್ಣ ಘಟನೆಗಳಿಗೆ ಅಂತಿಮವಾಗಿ ಯಾವ ಅರ್ಥವೂ ಇಲ್ಲವೆನ್ನಬಹುದೇ.

ಇದು ಚಾರುವಿಗೆ ಒಪ್ಪಿಗೆ ಇಲ್ಲ.

ಇಷ್ಟು ಅಗಾಧವಾದ ವಿಶ್ವದಲ್ಲಿ ಪ್ರತಿಯೊಂದು ಕ್ಷಣವನ್ನು, ಪ್ರತಿಯೊಂದು ಘಟನೆಯನ್ನು ಸಂಗ್ರಹಿಸಿ ಇಟ್ಟುಕೊಳ್ಳಲು ಜಾಗ ಇರಲೇಬೇಕು. ಕಂಪ್ಯೂಟರಿನ ಡೆಟಾ ಬ್ಯಾಂಕಿನ ಹಾಗೆ. ಮುಂದಿನ ನೂರು... ಇನ್ನೂರು ವರ್ಷಗಳಲ್ಲಿ ಯಾರಾದರೂ ಹಚ್ಚಿರುವುದನ್ನು ಶೋಧಿಸುವ ಹಾಗೆ ಹೃದಯದ ತೆರೆಯ ಹಿಂದೆ ಅಡಗಿಕೊಂಡಿರುವ ಘಟನೆಗಳು ಮತ್ತೆ ಸುಲಭವಾಗಿ ಹೊರಗೆ ತೆಗೆಯಲು ಸಿಗಬಹುದು. ಆಮೇಲೆ ಯಾವುದಾದರೂ ಒಂದು ಕ್ಷಣದಲ್ಲಿ ಬಂಧಿಯಾಗಿರುವ ನನ್ನ ಮತ್ತು ನಿರ್ಮಲಳ ಸಂಭಾಷಣೆಯನ್ನು ಯಾರೂ ಕೇಳಲು